# ಪತಿತ ಪಾವನೆ ಶ್ರೀಮಾತೆ

## ಶ್ರೀಮಾತೆಯವರ ಪತಿತೋದ್ಧಾರಕ ಶಕ್ತಿಯ ಇತ್ತೀಚಿನ ದೃಷ್ಟಾಂತ

❑ ಪಿ. ಮುರುಗನ್

[ಜೀವಕಾರುಣ್ಯವೇ ಮೈತಳೆದಂತಿದ್ದ ಶ್ರೀಮಾತೆಯವರ ಬದುಕಿನಲ್ಲಿ ಪತಿತೋದ್ಧಾರಕ ಶಕ್ತಿ ಅನಂತ ರೂಪಗಳಲ್ಲಿ ವ್ಯಕ್ತವಾಗುತ್ತಿದ್ದ ಪರಿಯನ್ನು ಅವರ ಜೀವನಚರಿತ್ರೆ ನಮಗೆ ತಿಳಿಸುತ್ತದೆ. ಆದರೆ ಆ ಶಕ್ತಿ ಕೇವಲ ಶ್ರೀಮಾತೆಯವರ ಐಹಿಕ ಜೀವಿತಾವಧಿಗೆ ಮಾತ್ರ ಸೀಮಿತವಾಗದೆ ಒಂದೂವರೆ ಶತಮಾನಕ್ಕಿಂತಲೂ ಮಿಗಿಲಾಗಿ ಕ್ರಿಯಾಶೀಲವಾಗಿರುವುದಕ್ಕೆ ಹಲವು ನಿದರ್ಶನಗಳಿವೆ. ತಮಿಳುನಾಡಿನ ಕಡಲೂರು ಜೈಲಿನಲ್ಲಿ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವ ಶ್ರೀ ಮುರುಗನ್ ಎಂಬಾತನು ಶ್ರೀಮಾತೆಯವರ ಜೀವನ ಸಂದೇಶಗಳು ತನ್ನ ಬದುಕಿನ ಅತ್ಯಂತ ವಿಷಮ ಘಳಿಗೆಯಲ್ಲಿ ಹೇಗೆ ಮಾರ್ಗದರ್ಶಕವಾಗಿ ಅಂಧಕಾರಮಯವಾದ ತನ್ನ ಬದುಕನ್ನು ಬೆಳಗಿತು ಎಂಬುದನ್ನು ಹೃದಯಸ್ಪರ್ಶಿಯಾಗಿ ನಿವೇದಿಸಿಕೊಂಡಿರುವ ಬರಹವೊಂದನ್ನು ನಮ್ಮ ಓದುಗರ ಮುಂದಿಡುತ್ತಿದ್ದೇವೆ.

ಶ್ರೀಮಾತೆಯವರ ೧೫೦ನೇ ಜನ್ಮಶತಾಬ್ದಿಯ ಅಂಗವಾಗಿ ರಾಮಕೃಷ್ಣ ಮಹಾಸಂಘದ ತಮಿಳು ಮಾಸಪತ್ರಿಕೆ ಶ್ರೀರಾಮಕೃಷ್ಣ ವಿಜಯಂ ಪ್ರಬಂಧಸ್ಪರ್ಧೆಯೊಂದನ್ನು ಏರ್ಪಡಿಸಿತ್ತು. ಎಲ್ಲರೂ ಭಾಗವಹಿಸಬಹುದಾಗಿದ್ದ ಈ ಮುಕ್ತ ಪ್ರಬಂಧಸ್ಪರ್ಧೆಯಲ್ಲಿ ತೀರ್ಪುಗಾರರೆಲ್ಲರ ಮೆಚ್ಚುಗೆಯನ್ನು ಗಳಿಸಿದ ಪ್ರಬಂಧವನ್ನು ಬರೆದವರು ಮೇಲೆ ತಿಳಿಸಿದ ಶ್ರೀ ಮುರುಗನ್ ಎಂಬ ಆಪಾದಿತ. ಅವನ ಬರಹದಲ್ಲಿ ಎದ್ದು ಕಾಣುತ್ತಿದ್ದ ಪಾರದರ್ಶಕ ಪ್ರಾಮಾಣಿಕತೆಯಿಂದ ಇದೊಂದು ಅತ್ಯುತ್ತಮ ಪ್ರಬಂಧವೆಂದು ತೀರ್ಪುಗಾರರಿಂದ ಆಯ್ಕೆಯಾಗಿದೆ.

ಈ ಪ್ರಬಂಧವನ್ನು ಬರೆದ ಶ್ರೀ ಮುರುಗನ್‌ನನ್ನು ಕಾಣಲು ಚೆನ್ನೈ ರಾಮಕೃಷ್ಣ ಮಠದ ಐವರು ಭಕ್ತರು ಕಳೆದ ಅಕ್ಟೋಬರ್‌ನಲ್ಲಿ ಹೋದಾಗ ಅವರು ಕಂಡದ್ದು ೨೫ ವರ್ಷದ ತರುಣನೊಬ್ಬನನ್ನು. ತನ್ನ ೧೭ನೇ ವರ್ಷದಿಂದಲೂ ಜೈಲುವಾಸ ಅನುಭವಿಸುತ್ತಿರುವ ಈತನಿಗೆ ತನ್ನ ಪ್ರಬಂಧಕ್ಕೆ ಬಹುಮಾನ ದೊರಕಿದ ಸಮಾಚಾರವನ್ನು ತಿಳಿಸಿದಾಗ, ತಿಳಿಯಾದ ಮುಗುಳ್ನಗೆ ಮತ್ತು ನಮ್ರತೆ ಆತನಲ್ಲಿ ವ್ಯಕ್ತವಾಯಿತೇ ವಿನಃ ಯಾವುದೇ ಭಾವೋದ್ವೇಗವೂ ಆತನ ಮುಖದಲ್ಲಿ ಕಾಣಲಿಲ್ಲ. ಪ್ರಬಂಧಕ್ಕೆ ಬಹುಮಾನವಾಗಿ ಆತ ಏನು ಅಪೇಕ್ಷಿಸುತ್ತಾನೆಂದು ಕೇಳಿದಾಗ, ಇತರೆ ಜೈಲುವಾಸಿಗಳಿಗೆ ಹಂಚುವುದಕ್ಕಾಗಿ ಶ್ರೀಮಾತೆಯವರ ಜೀವನಕ್ಕೆ ಸಂಬಂಧಿಸಿದ ಕೆಲವು ಪುಸ್ತಕಗಳನ್ನು ಕೊಟ್ಟರೆ ಸಾಕೆಂದನು. ಇನ್ನೇನಾದರೂ ಸಹಾಯ ಬೇಕೆ ಎಂದು ಕೇಳಿದಾಗ ಅವನ ಕಳಕಳಿಯ ಉತ್ತರ : "ಭಗವಂತನು ನನಗೆಲ್ಲ ಒದಗಿಸುತ್ತಾನೆ, ನನಗೇನೂ ಬೇಡ. ಇಲ್ಲಿರುವ ಹಲವು ಕೈದಿಗಳು ಅನೇಕ ವರ್ಷಗಳಿಂದ ಇಲ್ಲಿದ್ದಾರೆ. ಅವರ ಮಕ್ಕಳನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ಅವರಿಗೋಸ್ಕರ ನಿಮಗೇನಾದರೂ ಸಹಾಯ ಮಾಡಲು ಸಾಧ್ಯವಾದರೆ ಅದು ಒಳ್ಳೆಯದು."

ಜೈಲಿನ ಕೈದಿಗಳಿಗಾಗಿ ಪ್ರಬಂಧ ಮತ್ತು ಕವನ ಸ್ಪರ್ಧೆಗಳನ್ನು ಮುರುಗನ್ ಏರ್ಪಡಿಸಿದ್ದನು. ಅವನ ಪ್ರೇರಣೆಯಿಂದ ಜೈಲಿನಲ್ಲಿಯೇ ಶ್ರೀಶಾರದಾದೇವಿಯವರ ೧೫೦ನೇ ಜಯಂತಿಯನ್ನು ಜೈಲು ಮುಖ್ಯಸ್ಥರ ಸಮಕ್ಷಮದಲ್ಲಿ ಕೈದಿಗಳೆಲ್ಲ ಆಚರಿಸಿದರು. ಮುಂದೆ ಸ್ವಾಮಿ ವಿವೇಕಾನಂದರ ಮತ್ತು ಶ್ರೀರಾಮಕೃಷ್ಣರ ಜಯಂತಿಗಳನ್ನೂ ಆಚರಿಸಿದರು. ಶಿಕ್ಷಾವಧಿಯನ್ನು ಹ್ರಸ್ವಗೊಳಿಸಿ ಬಿಡುಗಡೆ ಮಾಡುವುದಾಗಿ ತಿಳಿಸಿದಾಗ ಮುರುಗನ್‌ನ ಪ್ರತಿಕ್ರಿಯೆ ಇದು : "ನನಗೆ ಈಗ ಜೈಲಿನಿಂದ ಹೊರಹೋಗಲು ಇಷ್ಟವಿಲ್ಲ. ನನ್ನ ಆಧ್ಯಾತ್ಮಿಕ ಸಾಧನೆಗೆ ಭಂಗವುಂಟಾಗುತ್ತದೆ. ನಾನು ಇಲ್ಲೇ ಸಾಧನೆ ಮುಂದುವರೆಸಿ ಆಧ್ಯಾತ್ಮಿಕ ಜೀವನದಲ್ಲಿ ಉನ್ನತ ಮಟ್ಟಕ್ಕೆ ಏರುವ ಆಸೆ."

ಚೆನ್ನೈ ರಾಮಕೃಷ್ಣ ಮಠದ ಸ್ವಾಮೀಜಿಯವರು ಜೈಲಿಗೆ ಭೇಟಿಕೊಟ್ಟು ಆತನ ಅಪೇಕ್ಷೆಯಂತೆ ಆತನಿಗೆ ಕೆಲವು ಪುಸ್ತಕಗಳನ್ನು ನೀಡಿದರು. ಆತನಿಗಾಗಿಯೇ ಕೊಟ್ಟ ಶ್ರೀಮಹಾಮಾತೆಯವರ ಭಾವಚಿತ್ರವನ್ನು ಅತ್ಯಂತ ಕೃತಜ್ಞತೆ ಹಾಗೂ ಸಂತೋಷಗಳಿಂದ ಸ್ವೀಕರಿಸಿದನು. ಶಾಂತ, ಗಂಭೀರ ಹಾಗೂ ಮೃದುಭಾಷಿಯಾದ ಮುರುಗನ್ ತನ್ನನ್ನು ಭೇಟಿಯಾಗಲು ಆಶ್ರಮದಿಂದ ಬಂದಿದ್ದ ಎಲ್ಲರಿಗೂ ತನ್ನ ಅಭಿನಂದನೆಗಳನ್ನು ಸಲ್ಲಿಸಿದನು. ಜೈಲುವಾಸ ಅನುಭವಿಸುತ್ತಿರುವ ಎಲ್ಲ ಆಪಾದಿತರೂ ಮುರುಗನ್‌ನಂತೆ ಪರಿವರ್ತಿತರಾದರೆ ಅದಕ್ಕಿಂತ ದೊಡ್ಡ ಪವಾಡ ಇನ್ನೇನಿದೆ ಎನ್ನುತ್ತಾರೆ ಜೈಲು ಅಧಿಕಾರಿಗಳು.

ಈ ಪ್ರಬಂಧದ ಕನ್ನಡಾನುವಾದ ಮಾಡಿರುವವರು ಮೈಸೂರಿನ ಕಾಲೇಜೊಂದರಲ್ಲಿ ಪ್ರಾಧ್ಯಾಪಕಿಯಾಗಿರುವ ಡಾ. ಎಂ.ಎ. ಜಯಶ್ರೀ ಅವರು.]

**ಪ್ರೀ**ತಿ, ಕರುಣೆ, ಸಮಾಧಾನ, ಸಮತ್ವ ಮೊದಲಾದುವುಗಳಿಗೆ ಮೂಲಸ್ಥಾನವೂ ತಾಯ್ತನದ ಮೂರ್ತರೂಪವೂ ಆಗಿ, ಸಂನ್ಯಾಸಿಗೂ ಗೃಹಸ್ಥನಿಗೂ ತನ್ನ ಬಾಳನ್ನೇ ಮಾದರಿಯಾಗಿ ತೋರಿ, ಆಧ್ಯಾತ್ಮಿಕ ಉನ್ನತಿಗೆ ದಾರಿತೋರಿದವರು ಮಹಾಮಾತೆ ಶ್ರೀಶಾರದಾದೇವಿಯವರು. ಶ್ರೀಮಾತೆಯವರ ಅಮೃತವಚನಗಳಿಗೆ, ಉಪದೇಶಗಳಿಗೆ ಸರಿಸಾಟಿಯಾದದ್ದು ಮತ್ತೊಂದಿಲ್ಲ. ಕರುಣೆಯಿಂದ ಹೇಳಿರುವ ಒಂದೊಂದು ಮಾತೂ ತನ್ನ ಮಕ್ಕಳಿಗೆ ಉತ್ತಮ ಜೀವನವನ್ನೂ ಶಾಂತಿ ಸಮಾಧಾನಗಳನ್ನೂ ನೀಡುವುವೆಂಬ ಭರವಸೆಯೊಂದಿಗೆ ಹೇಳಲಾಗಿದೆ. ಆದ್ದರಿಂದ ಆ ನುಡಿಗಳು ಎಲ್ಲರ ಬಾಳನ್ನೂ ಪವಿತ್ರಗೊಳಿಸಿದಂತೆ ನನ್ನ ಬಾಳನ್ನೂ ಪಾವನಗೊಳಿಸಿದೆ.

ಸಮಾಜದಲ್ಲಿ ಎಷ್ಟೋ ಸಮಸ್ಯೆಗಳಿವೆ. ನನ್ನ ಅತ್ಯಲ್ಪವಾದ ಜೀವಿತಕಾಲದಲ್ಲಿಯೂ ಹಲವು ಸಮಸ್ಯೆಗಳು ಎದುರಾಗಿವೆ. ಅವುಗಳನ್ನೆದುರಿಸಲು ಶ್ರೀಮಾತೆಯವರ ಉಪದೇಶಗಳು ಬಹಳಷ್ಟು ಸಹಾಯ ಮಾಡಿರುವ ಪರಿಯನ್ನು ವಿವರಿಸುತ್ತೇನೆ. ನಾನು, ನನ್ನ ತಂದೆ ಮತ್ತು ನನ್ನ ಸಹೋದರ ಮೂವರೂ ಕೊಲೆಗಾರರೆಂದು ಆಪಾದಿತರಾದೆವು. ಮೂವರಿಗೂ ಜೀವಾವಧಿ ಶಿಕ್ಷೆಯನ್ನು ವಿಧಿಸಿದರು. ಸೆರೆಮನೆಗೆ ಕಾಲಿಟ್ಟಾಗಲೇ ನನ್ನ ಮೈಮನಗಳೆರಡೂ ಒಡೆದುಹೋದವು. ದುಃಖ, ವೇದನೆ ನನ್ನನ್ನು ಆವರಿಸಿದವು. ನನ್ನ ತಾಯಿ, ನನ್ನ ಇಬ್ಬರು ಸೋದರಿಯರು ನಮ್ಮನ್ನಗಲಿ ಪಡುವ ಬವಣೆಗಳೆಷ್ಟೋ ಹೇಳತೀರದು.

ಇಂತಹ ಮನಃಸ್ಥಿತಿಯಲ್ಲಿದ್ದಾಗ, ಈ ದುಃಖ ದುಮ್ಮಾನಗಳಿಗೆ ಕೊನೆಮುಟ್ಟಿಸಬೇಕೆಂದು ಯೋಚಿಸುತ್ತಾ, ಸಾವೇ ಈ ಕಷ್ಟಗಳಿಗೆಲ್ಲಾ ಕೊನೆ, ಆತ್ಮಹತ್ಯೆಯೇ ಅಂತಿಮ ಪರಿಹಾರ ಎಂದು ನಿಶ್ಚಯಿಸಿದೆ. ಅನಂತರ ಅದೇ ರಾತ್ರಿ (18.01.2001) ಕೋಣೆಯಲ್ಲಿ ಬಂಧಿತನಾಗಿ ಗೋಳಾಡುತ್ತಾ, ಕಣ್ಣೀರು ಸುರಿಸುತ್ತಾ ಇರುವಾಗ ನನ್ನೊಡನಿದ್ದ ಮಿತ್ರನೊಬ್ಬ, "ಶ್ರೀಮಾತೆ ಶಾರದಾದೇವಿಯವರ ಜೀವನ ಮತ್ತು ಉಪದೇಶಗಳು" ಎಂಬ ಪುಸ್ತಕವೊಂದನ್ನು ಓದಲು ಕೊಟ್ಟನು. ಶಾಂತಿಯನ್ನು ಕುರಿತ ಶ್ರೀಮಾತೆಯವರ ಒಂದು ಉಪದೇಶ ಹೀಗಿತ್ತು : "ಕಷ್ಟಗಳಿಂದ ನೊಂದ ನಿನ್ನ ಮನಸ್ಸನ್ನು ಪರಮಾತ್ಮನ ಬಳಿ ತೆರೆದು, ತೋರಿ, ಕಣ್ಣೀರಿಟ್ಟು, ಅತ್ತು, 'ದೇವ! ನನ್ನನ್ನು ನಿನ್ನೆಡೆಗೆ ಸೆಳೆದುಕೋ. ನನಗೆ ಶಾಂತಿ ನೀಡು' ಎಂದು ಸತತವಾಗಿ ಬೇಡಿದರೆ ಕ್ರಮೇಣ ನೀನು ಶಾಂತಿಯನ್ನು ಪಡೆಯುವೆ."

ನಾನಾದರೋ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವ ಅಪರಾಧಿ. ಹಲವಾರು ಕಷ್ಟಗಳನ್ನು ಸಹಿಸಿಕೊಂಡಿದ್ದೇನೆ. ಆದರೆ, ಈ ಉಪದೇಶವನ್ನು ಮತ್ತೆ ಮತ್ತೆ ಓದಿದಮೇಲೆ ಶ್ರೀಮಾತೆಯವರ ಅಮೃತವಚನವನ್ನು ಅನುಸರಿಸಲು ತೊಡಗಿದೆ. ಪ್ರತಿದಿನವೂ ಹಗಲಿರುಳೂ ಪರಮಾತ್ಮನ ಬಳಿ ಕಣ್ಣೀರಿಟ್ಟು ಅತ್ತು ಬೇಡಿದೆ. ಮೂರು ವರ್ಷಗಳಿಂದಲೂ ಮಾಡುತ್ತಿದ್ದೇನೆ. ಇದರಿಂದ ಶ್ರೀಗುರುದೇವರು ಮತ್ತು ಶ್ರೀಮಾತೆ ಇವರೀರ್ವರ ಅನುಗ್ರಹವನ್ನು ನನ್ನ ಅಂತರಂಗದಲ್ಲಿ ಅನುಭವಿಸಿ ಪೂರ್ಣವಾದ ಶಾಂತಿ ಸಮಾಧಾನಗಳನ್ನು ಪಡೆದಿದ್ದೇನೆ.

'ಕೈ ಪಳಗಿದರೆ ಚಿತ್ರಕಲೆ, ನಾಲಿಗೆ ಪಳಗಿದರೆ ಸಾಹಿತ್ಯ' (*ಚಿತ್ತಿರಮುಂ ಕೈಪಳಕ್ಕಂ, ಶೆನ್‌ತಮಿಳುಂ ನಾಪ್ಪಳಕ್ಕಂ*) ಎಂಬ ನಾಣ್ಣುಡಿಯಂತೆ, ನಿರಂತರವಾಗಿ ಪ್ರಾರ್ಥನೆಯನ್ನು ಮಾಡಲು ದುಃಖ ದೂರವಾಗಿ ಹೆಚ್ಚಿನ ತಿಳಿವಳಿಕೆಯನ್ನು ಪಡೆದೆ. ಭಕ್ತಿ ಎಂದರೆ ಏನೆಂದೇ ತಿಳಿಯದಿದ್ದ ನಾನು, ಇಂದು ಸೆರೆಮನೆಯಲ್ಲಿರುವ ಎಲ್ಲರಿಗೂ ಆಧ್ಯಾತ್ಮಿಕ ಚಿಂತನೆಗಳನ್ನು ಹೇಳುತ್ತಿದ್ದೇನೆಂದರೆ ಅದು ಶ್ರೀಮಾತೆಯವರ ಅನುಗ್ರಹದಿಂದಲೇ ಅಲ್ಲದೆ ಮತ್ತೇನು!

ಶ್ರೀಮಾತೆಯವರು ಸೇವೆಯನ್ನು ಕುರಿತು ಹೀಗೆ ನುಡಿದಿದ್ದಾರೆ: "ಯಾವಾಗಲೂ ಇತರರ ಸೇವೆಯನ್ನು ಮನಸ್ಸಿಟ್ಟು ಕರ್ತವ್ಯವೆಂಬಂತೆ ಮಾಡುತ್ತಿರು. ದೇವರಲ್ಲಿ ಮಾತ್ರ ಶ್ರದ್ಧೆ ವಿಶ್ವಾಸಗಳನ್ನಿಡು. ಜಗತ್ತಿಗೆ ಅಂಟಿಕೊಂಡರೆ ಅದು ಅನಂತ ಕಷ್ಟಗಳನ್ನು ಕೊಡುತ್ತದೆ."

'ಜೀವಸೇವೆಯೇ ಶಿವಸೇವೆ' ಎಂಬ ಮಾತೃವಚನವು ನಾನು ಎಲ್ಲರನ್ನೂ ಆಳವಾಗಿ ಪ್ರೀತಿಸುವಂತೆ ಮಾಡಿತು. ಇತರರಿಗಾಗಿಯೇ ಬಾಳಬೇಕು ಎಂಬ ಮಾತೃಹೃದಯ ಪರಮಾತ್ಮನ ಹೃದಯವೇ ಅಲ್ಲವೇ! ಶ್ರೀಮಾತೆಯವರ ಈ ಉಪದೇಶವನ್ನು ಪಾಲಿಸಲು ತೊಡಗಿದೆ. ನಾನು ಸೆರೆಮನೆಯಲ್ಲಿರುವುದರಿಂದ ಹಣದಿಂದಾಗಲೀ ವಸ್ತುಗಳಿಂದಾಗಲೀ ಇತರರಿಗೆ ಸಹಾಯಮಾಡಲಾಗುವುದಿಲ್ಲ. ಅದಲ್ಲದೆ ಸೆರೆಮನೆಯಲ್ಲಿರುವ ಅಪರಾಧಿಗಳೇ ನೆಮ್ಮದಿಯಿಲ್ಲದೆ ಕಷ್ಟಗಳು, ಸಮಸ್ಯೆಗಳು, ದುಃಖಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿರುತ್ತಾರೆ. ಆದ್ದರಿಂದ ಇವರ ಕಷ್ಟ ದುಃಖಗಳನ್ನು ತೊಡೆದು, ಅವರಿಗೆ ಸಮಾಧಾನ ನೀಡಿ ಶಾಂತಿಯಿಂದ ಬಾಳುವಂತೆ ಮಾಡುವುದೇ ಜನಸೇವೆಯೆಂದು ತಿಳಿದುಕೊಂಡೆ. ಸೆರೆಮನೆಯಲ್ಲಿರುವ ಈ ನನ್ನೆಲ್ಲ ಸೋದರರಿಗೆ ಭಗವದ್ಗೀತೆ, ತಿರುವಾಚಕಂ ಹಾಗೂ ಶ್ರೀಗುರುದೇವರ, ಶ್ರೀಮಾತೆಯವರ, ಸ್ವಾಮಿ ವಿವೇಕಾನಂದರ ವಚನೋಪದೇಶಗಳನ್ನೊಳಗೊಂಡ ಹಲವಾರು ಪುಸ್ತಕಗಳ ವಾಚನದ ಮೂಲಕ ಜೀವನವನ್ನು ಎದುರಿಸಲು ಧೈರ್ಯತುಂಬಿ, ಪ್ರೀತಿ ಸಮಾಧಾನ, ಸಮತ್ವಗಳನ್ನು ಎಲ್ಲೆಡೆ ಪಸರಿಸಲು ನಿರ್ಧರಿಸಿದೆ. ಸೆರೆಮನೆಯನ್ನು ತಪೋವನವನ್ನಾಗಿ ಮಾರ್ಪಡಿಸಲು ಸಾಧ್ಯವೆಂಬ ಪೂರ್ಣ ವಿಶ್ವಾಸದಿಂದ ೨೦.೦೧.೨೦೦೧ರಿಂದ ಸೇವೆಯನ್ನಾರಂಭಿಸಿದೆ.

ಶ್ರೀಮಾತೆಯವರು ಅಧ್ಯಾತ್ಮಜೀವನದಲ್ಲಿ ಯಶಸ್ಸು ಗೆಲುವನ್ನು ಸಾಧಿಸಲು ಸತತ ಪ್ರಯತ್ನದ ಆವಶ್ಯಕತೆಯನ್ನು ಒತ್ತಿ ಹೇಳುತ್ತಾರೆ: "ಧೃತಿಗೆಡದೆ ಸತತವಾಗಿ ಪ್ರಾರ್ಥನೆಯನ್ನು ಮಾಡುತ್ತಿರು. ಕಾಲಕಳೆದಂತೆ ಎಲ್ಲವೂ ನೆರವೇರುತ್ತದೆ. ಹಲವಾರು ಋಷಿಮುನಿಗಳು ಹಲವಾರು ವರ್ಷಗಳ ತಪಸ್ಸನ್ನು ಮಾಡಿಯೂ ಅವರಿಗೆ ಪರಮಾತ್ಮನು ಲಭಿಸಲಿಲ್ಲ. ಹಾಗಿರಲು, ನೀನು ಕೇಳಿದೊಡನೆಯೇ ಅವನು ನಿನಗೆ ದರ್ಶನವೀಯುವನೆ? ದೈವ ಸಾಕ್ಷಾತ್ಕಾರ ಅಷ್ಟು ಸುಲಭವೇ? ಸುದೈವದಿಂದ ಈಗ ಗುರುದೇವರು ಸುಲಭಮಾರ್ಗವನ್ನು ತೋರಿದ್ದಾರೆ. ಆದರೂ ಅದು ಎಲ್ಲರಿಗೂ ಅಷ್ಟು ಸುಲಭವಲ್ಲ.

"ದೇವರನ್ನು ಪಡೆಯುವುದು ಅಷ್ಟು ಸುಲಭವಲ್ಲ. ಈ ಪ್ರಪಂಚದಲ್ಲಿರುವ ಸಮಸ್ಯೆಗಳನ್ನು ಎದುರಿಸಿ ಹೋರಾಡಲು ಸಾಧ್ಯವಾದರೆ ಮಾತ್ರವೇ ದೇವರನ್ನು ಪಡೆಯಲು ಸಾಧ್ಯ.... ಹಲವಾರು ಬಾರಿ ಪ್ರಯತ್ನಿಸಿಯೂ ಜಯ ಸಾಧಿಸಲಾರದೆ ಸೋತುಹೋದರೂ ಸತತ ಪ್ರಯತ್ನದಿಂದ ದೇವರನ್ನು ಮಾತ್ರವಲ್ಲ, ಪ್ರಪಂಚದಲ್ಲಿರುವ ಯಾವ ಗುರಿಯನ್ನೂ ಸಾಧಿಸಬಹುದು." ಶ್ರೀಮಾತೆಯವರ ಈ ಅಮೃತವಚನದಂತೆ ಭಗವಾನ್ ಶ್ರೀರಾಮಕೃಷ್ಣರನ್ನು ಗುರುದೇವರಂತೆ ಕಂಡು ಅವರು ತೋರಿದ ದಾರಿಯಲ್ಲಿ ಸ್ವಾಮಿ ವಿವೇಕಾನಂದರು ನಡೆದಂತೆ ನಾನೂ ನಡೆಯುತ್ತಿದ್ದೇನೆ.

ಶ್ರೀಮಾತೆಯವರು ಈ ವಿಶ್ವವನ್ನೇ ನಮ್ಮದಾಗಿಸಿಕೊಳ್ಳಬೇಕೆಂದು ತಿಳಿಸುವ ನುಡಿಗಳು ಹೀಗಿವೆ: "ಮಗು! ನಿನಗೆ ನೆಮ್ಮದಿ ಬೇಕಾದರೆ ಇತರರ ಕುಂದುಕೊರತೆಗಳನ್ನು ಕಾಣಬೇಡ. ಮೊದಲು ನಿನ್ನಲ್ಲಿರುವ ಕುಂದುಕೊರತೆಗಳನ್ನು ಗಮನಿಸು. ಈ ಜಗತ್ತೇ ನಿನ್ನದು. ಇಲ್ಲಿರುವ ಯಾರೂ ಅನ್ಯರಲ್ಲ."

ನೆಮ್ಮದಿಯನ್ನು ಪಡೆಯುವ ರಹಸ್ಯವನ್ನು ಶ್ರೀಮಾತೆಯವರು ಹೀಗೆ ತಿಳಿಸಿಕೊಡುತ್ತಾರೆ: "ನೆಮ್ಮದಿಯನ್ನರಸುವವನು ತನ್ನನ್ನು ತಾನು ಅರಿಯಬೇಕು. ತನ್ನ ಕುಂದುಕೊರತೆಗಳನ್ನು ಅರಿತಾಗಲೆ ತಾನು ಯಾರೆಂಬುದು ತಿಳಿಯುತ್ತದೆ." ಆದ್ದರಿಂದ ಶ್ರೀಮಾತೆಯವರ ಈ ಉಪದೇಶವನ್ನು ನನ್ನ ಬಾಳಿನಲ್ಲಿ ಅನುಸರಿಸುತ್ತಿದ್ದೇನೆ. ಇತರರಲ್ಲಿನ ದೋಷವನ್ನೆಣಿಸದೆ, ನನ್ನನ್ನೇ ನಾನು ತಿಳಿದುಕೊಳ್ಳುವ ಈ ದೃಷ್ಟಿಪರಿವರ್ತನೆಯಿಂದ ನನ್ನ ಸುತ್ತಲಿನವರೆಲ್ಲ ನನಗೆ ಅತ್ಯಂತ ಆತ್ಮೀಯರಾಗಿದ್ದಾರೆ. ಇತರರ ಕಷ್ಟವನ್ನು ನನ್ನ ಕಷ್ಟದಂತೆ ಕಂಡಿದ್ದರಿಂದ ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡುತ್ತದೆ. ಈ ವಿಶ್ವವು ನಮ್ಮ ಮನೆಯೇ ಆಗಿರುವುದು ನಿಜವಾದರೆ, ಇಲ್ಲಿನ ಜನರೆಲ್ಲ ನನ್ನ ಸೋದರ ಸೋದರಿಯರೇ ಸರಿ. ಮಾತೆಯವರ ಈ ಅಮೃತವಚನದಿಂದ ನಾನು ಯಾವಾಗಲೂ ಆನಂದವಾಗಿಯೇ ಇದ್ದೇನೆ.

ನಿಜವಾದ ವಿನಯವನ್ನು ನನ್ನಲ್ಲಿ ಬೆಳೆಸಿಕೊಳ್ಳಲು ಸಹಾಯಕಾರಿಯಾದ ಶ್ರೀಮಾತೆಯವರ ಉಪದೇಶ: " 'ತನ್ನ ಹೃದಯದಲ್ಲಿ ತೋರುವ ದೇವರೇ ಕೆಳವರ್ಗದವರ, ಕೆಳಕ್ಕೆ ತಳ್ಳಲ್ಪಟ್ಟವರ, ಕಷ್ಟದಲ್ಲಿರುವವರ, ದಲಿತರ ಎಲ್ಲರ ಹೃದಯಗಳಲ್ಲಿಯೂ ಇರುವನು' ಎಂಬ ಈ ಅರಿವನ್ನು ಒಬ್ಬ ತನ್ನ ಆಧ್ಯಾತ್ಮಿಕ ಅನುಭವಗಳಿಂದ ಮಾತ್ರವೇ ಸ್ಪಷ್ಟವಾಗಿ ತಿಳಿಯಲು ಸಾಧ್ಯ. ಇದನ್ನು ತಿಳಿದುಬಿಟ್ಟರೆ ನಿಜವಾದ ನಯ-ವಿನಯವು ತಾನಾಗಿಯೇ ಬಂದುಬಿಡುತ್ತದೆ."

ಈ ಅಮೃತ ವಚನದಿಂದ ಪರಮಾತ್ಮನು ಎಲ್ಲರ ಹೃದಯಗಳಲ್ಲೂ ವಾಸವಾಗಿದ್ದಾನೆಂದು ತಿಳಿಯಿತು. ಭೇದಭಾವವನ್ನೇ ಬೆಳೆಸಿಕೊಂಡು ಬಂದಿದ್ದ ನಾನು ಎಲ್ಲರಲ್ಲೂ ದೇವರನ್ನು ಕಾಣುವ ಪ್ರಯತ್ನದಲ್ಲಿ ತೊಡಗಿದೆ. ನನ್ನ ಸುತ್ತ ನಾನೇ ರಚಿಸಿಕೊಂಡಿದ್ದ ಸಣ್ಣ ವೃತ್ತದಿಂದ ಹೊರಬರಲು ಪ್ರಯತ್ನಿಸಿದೆ. ನನ್ನನ್ನು ಆವರಿಸಿದ್ದ ಅಜ್ಞಾನವೆಂಬ ಪೊರೆಯು ಕ್ರಮೇಣ ಕಳಚಿಕೊಳ್ಳುತ್ತಿರುವ ಅನುಭವವಾಯಿತು. ಶ್ರೀಮಾತೆಯವರ ಅಪಾರ ಕಾರುಣ್ಯಕ್ಕೆ ಪಾತ್ರರಾಗದವರಾದರೂ ಯಾರಿದ್ದಾರು?

"ಪ್ರೀತಿ, ಕರುಣೆಗಳಿಲ್ಲದ ಒಬ್ಬನನ್ನು ಹೇಗೆ ಮನುಷ್ಯನೆನ್ನುವುದು?" ಎಂಬ ಶ್ರೀಮಾತೆಯವರ ನುಡಿಯನ್ನು ಕೇಳಿ ಮೃಗವಾಗಿದ್ದ ನಾನು ಇಂದು ಸನ್ಮಾರ್ಗದಲ್ಲಿ ನಡೆಯುತ್ತಿರುವ ವ್ಯಕ್ತಿಯಾಗಿದ್ದೇನೆ. ಈ ಉಪದೇಶದ ಮೂಲಕ ತಾಯಿಯ ಕರುಣೆಯೂ ಪ್ರೀತಿಯೂ ನನಗೆ ಲಭಿಸಿದವು. ಅವೇ ನನ್ನ ಇಂದಿನ ಸುಧಾರಿಸಿದ ಸ್ಥಿತಿಗೆ ಕಾರಣವಾಗಿದೆ.

ಕೊಲೆಗಾರನಾದ ನನ್ನನ್ನೂ ಇಂದು ಒಬ್ಬ ಗುರುವೆಂದು ಕೆಲವರು ಗೌರವಿಸುತ್ತಾರೆಂದರೆ ಅದು ನನ್ನ ಸಾಧನೆಯಲ್ಲ, ಶ್ರೀಮಾತೆಯವರ ಅನುಗ್ರಹ, ಅವರ ಉಪದೇಶಗಳ ಮಹಿಮೆ ಹಾಗೂ ಗುರುದೇವರ ಕರುಣೆಗಳೇ ಕಾರಣ. ಒಬ್ಬ ದರೋಡೆಕಾರ ರಾಮಾಯಣವನ್ನು ರಚಿಸಿ ಅಳಿಯದ ಕೀರ್ತಿಯನ್ನು ಪಡೆದಂತೆ ಒಬ್ಬ ಕೊಲೆಗಾರನಾದ ನಾನೂ ಜನತೆಗೆ ಮಾರ್ಗದರ್ಶಿಯಾಗಿ ಬದಲಾಗಲು ಸಹಾಯ ಮಾಡಿದುದು ಶ್ರೀಮಾತೆಯವರ ಉಪದೇಶ ಮತ್ತು ಅನುಗ್ರಹ.

ಈ ಜಗತ್ತಿನಲ್ಲಿ ಭೇದಭಾವನೆ ಮನೆಮಾಡಿರುವುದರಿಂದಲೇ ನಮ್ಮ ಸಮಾಜದಲ್ಲಿರುವ ಅನಿಷ್ಟಗಳು ತೊಲಗುವುದಿಲ್ಲ. ಆದ್ದರಿಂದ ಜನತೆಯನ್ನು ಪಾವನಗೊಳಿಸಲು, ಗಂಗೆಗಿಂತ ಪುನೀತವಾದ ಶ್ರೀಮಾತೆಯವರ ಉಪದೇಶಗಳು ಅತ್ಯವಶ್ಯಕ. ಶ್ರೀಮಾತೆಯವರ ಕರುಣಾವರ್ಷದಲ್ಲಿ ಮಿಂದರೆ ಈ ವಿಶ್ವವೇ ಪುನೀತವಾಗುತ್ತದೆ. ಶ್ರೀಮಾತೆಯವರಿಗೆ ಮಂಗಳ ಹಾಡಲು, ಕೊಂಡಾಡಲು ನನ್ನಲ್ಲಿ ಯೋಗ್ಯ ನುಡಿಗಳಿಲ್ಲ. ಆದ್ದರಿಂದ ಶ್ರೀಮಾತೆಯವರ ಶ್ರೀಚರಣಗಳಲ್ಲಿ ನನ್ನನ್ನೇ ಅರ್ಪಿಸಿಕೊಳ್ಳುತ್ತೇನೆ.

**ಪಿ. ಮುರುಗನ್**
(ಕಡಲೂರು ಸೆರೆಮನೆ)

**ಶ್ರೀಮಾತೆ ಶಾರದಾದೇವಿಯವರ ೧೫೦ನೇ ಜನ್ಮೋತ್ಸವದ ಈ ಪುಣ್ಯ ಸಂದರ್ಭದಲ್ಲಿ ನೀವು ಕೈಗೊಳ್ಳಬಹುದಾದ ಒಂದು ಅಪೂರ್ವ ಸೇವಾಕಾರ್ಯ ಯಾವುದು?**

- ಶ್ರೀಮಾತೆಯವರ ದಿವ್ಯವೂ ಹೃದಯಸ್ಪರ್ಶಿಯೂ ಜೀವನ ಪರಿವರ್ತಕವೂ ಆದ ಜೀವನ-ಸಂದೇಶವನ್ನು ಹೆಚ್ಚು ಜನರಿಗೆ ತಲುಪಿಸುವುದು.
- ಪ್ರತಿ ತಿಂಗಳೂ ಶ್ರೀಮಾತೆಯವರ ಜೀವನ-ಸಂದೇಶವನ್ನು ಹೊತ್ತು ತರುತ್ತಿರುವ 'ವಿವೇಕಪ್ರಭ' ಮಾಸಪತ್ರಿಕೆಯು ಹೆಚ್ಚು ಜನರಿಗೆ ತಲುಪುವಂತೆ ಮಾಡಿ.
- ನೀವು ಈ ಪತ್ರಿಕೆಗೆ ಕೇವಲ ಒಬ್ಬರೇ ಒಬ್ಬರು ಚಂದಾದಾರರನ್ನು ಮಾಡಿದರೂ ಅನೇಕರಿಗೆ ಶಾಂತಿ ನೆಮ್ಮದಿಯನ್ನು ಪಡೆಯಲು ಸಹಾಯ ಮಾಡಿದಂತಾಗುತ್ತದೆ.

**ತ್ವರೆ ಮಾಡಿ,**
**ಈ ಅಪೂರ್ವ ಅವಕಾಶವನ್ನು ಕಳೆದುಕೊಳ್ಳಬೇಡಿ.**